ಶ್ರೀ ಆರ್. ಗುಂಡೂರಾವ್.—ತಾವು ಹೇಳಿದಂತೆ ಯಾವಾಗಲೂ ಸಾರಿಗೆ ಮಂತ್ರಿಗಳು ಅಧ್ಯಕ್ಷರಾಗಿರಲಿಲ್ಲ. ಕಾನೂನು ಪ್ರಕಾರ ಆ ರೀತಿ ಆಗುವುದಕ್ಕೆ ಸಾಧ್ಯವಿಲ್ಲ. Transport Commissioner is the Chairman of the Tribunal Authority.

ಶ್ರೀ ಎಸ್. ಆರ್. ಬೊಮ್ಮಾಯಿ — ಹಿಂದೆ ಅನೇಕ ವರ್ಷಗಳ ಕಾಲ ಅನೇಕ ಜನ ಸಾರಿಗೆ ಮಂತ್ರಿಗಳು ಅಧ್ಯಕ್ಷರಾಗಿದ್ದ ಉದಾಹರಣೆಗಳು ಇವೆ. ಮಾನ್ಯ ಮಹಮದಾಲಿಯವರು ಅಧ್ಯಕ್ಷರಾಗಿದ್ದರು. ತಾವು ಕೂಡ ಅಧ್ಯಕ್ಷರಾಗಿದ್ದಿರಿ.

SRI R. GUNDU RAO.—Please note, that it is for KSRTC. The hon. Member is asking for State Transport Authority,

Per capita Income in North Kanara District

529. SMT. ANASUYA GAJANANA SHARMA (Ankola) — Will the Minister for Finance and Planning be pleased to state.—

(a) the per capita income in North Kanara District;

(b) the names of districts with maximum and minimum *per capita* income in the State as also the *per capita* income in each district;

(c) whether Government is aware that there is no benefit to North Kanara District from the factories which are located there;

(d) whether Government has any proposal to declare this district as a most backward district and to extend all possible help from Government that it deserves;

(e) what steps the Government has taken to develop this district in all facts of life ?

SRI VEERAPPA MOILY (Minister for Finance & Planning).—

(a) Rs. 1,356.26 (as in 1977-78).

(b) Maximum *per capita* income :—Kodagu District—Rs. 2,838.75.

Minimum *per capita* income:—Bijapur District—Rs. 769.92.

Per Capita income in other districts .— Statement appended.

(c) No

(d) In their Order No. CI 141 SPC 78 (I), dated 13th June 1980, the State Government have declared three Taluks of the district *viz.*, Karwar, Sirsi and Haliyal, as industrially backward for granting concessions/incentives to entrepreneurs for setting up of industries.

(e) An objective criteria has been evolved to distribute district sector funds amongst various districts, according to which 50% of district sector plan outlay is allocated on the basis of population and

the other 50% on the basis of backwardness of the districts. In addition, the Western Ghats Region Development Programme, the Uttara Kannada District Integrated Development Project with DANIDA assistance, the SFDA Programme, the Integrated Rural Development Project and the Employment Affirmation Scheme are being implemented in this district for its development in all facets of life.

STATEMENT

Showing the *per capita* income of the various districts in Karnataka (1977-78.)*

District		*Per Capita Income (in Rs)*
1. Bangalore	...	1,467.01
2. Belgaum	...	968.31
3. Bellary	...	1,096.09
4. Bidar	...	879.74
5. Bijapur	...	769.92
6. Chickmagalur	...	1,519.81
7. Chitradurga	...	1,036.57
8. Dakshina Kannada	...	1,349.64
9. Dharwar	...	907.50
10. Gulbarga	...	948.56
11. Hassan	...	1,112.19
12. Kodagu	...	2,838.75
13. Kolar	...	879.65
14. Mandya	...	1,063.30
15. Mysore	...	1,198.10
16. Raichur	...	1,010.54
17. Shimoga	...	1,483.61
18. Tumkur	...	936.15
19. Uttara Kannada	...	1,336.26
State average	...	1,132.06

*Provisional.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ''ಇಲ್ಲವೆಂದು'' ಕೇಳಿದ್ದೀರಿ; ಮತ್ತು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ೧೩೩೬.೨೬ ರೂಪಾಯಿಗಳು ಎಂದು ಕೇಳಿದ್ದೀರಿ. ಆದ್ದರಿಂದ, ಇಲ್ಲಿ ನನಗೆ ಏನು ಒಂದು ಅನುಮಾನ ಬರುತ್ತದೆಂದರೆ, ಉತ್ತರ ಹಿಂದೂ ಸ್ಥಾನದಿಂದ ಬಂದು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಉದ್ಯಮ ಮಾಡುತ್ತಿರುವವರ (ಕಾರ್ಖಾನೆಗಳ ಬಂಡವಾಳವನ್ನು ಇದರಲ್ಲಿ ಸೇರಿಸಿ ಕೊಟ್ಟಿದ್ದೀರಾ ? ಎಂದು,

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದನ್ನೆಲ್ಲ ಸೇರಿಸಿಯೇ ಆ ಜಿಲ್ಲೆಯ ಉತ್ಪನ್ನ ಇಷ್ಟು ಎಂದು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಹೊರಗಿನಿಂದ ಬಂದವರು ನಮ್ಮ ಜಿಲ್ಲೆಯಲ್ಲಿ ಉತ್ಪನ್ನ ಮಾಡಿ ಲಾಭ ತೆಗೆದುಕೊಂಡು ಹೋದರೆ ನಮ್ಮ ಜಿಲ್ಲೆಯವರಿಗೆ ಏನು ಲಾಭ ಇದೆ ? ನಮ್ಮ ಜಿಲ್ಲೆಯ ಉತ್ಪನ್ನದಲ್ಲಿ ಅದನ್ನು ಸೇರಿಸಿರುವುದು ಸರಿಯೇ ಅಥವಾ ತಪ್ಪೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಮಾಡಿದಂತಹ ಲೆಕ್ಕಾಚಾರ ಸರಿಯಲ್ಲ. ಏಕೆಂದರೆ, ಉತ್ತರ ಹಿಂದೂಸ್ಥಾನದವರು ಬಂದಾಗ ಆ ಜಿಲ್ಲೆಯ ಮೇಲೆ ಸ್ವಲ್ಪ ಪರಿಣಾಮ ಬೀಳಬಹುದು; ಅದು ಕೇವಲ ಶೇಕಡ ೨ ರಷ್ಟು. ಅವರು ಮಾಡತಕ್ಕ ಒಟ್ಟು ಉತ್ಪನ್ನ ಮತ್ತು ನಮ್ಮ ಉತ್ಪನ್ನವನ್ನು ಸೇರಿಸಿ ವ್ಯಕ್ತಿಪರ ಆದಾಯವನ್ನು ಅಳೆದಿದ್ದೇವೆ. ಉತ್ತರ ಹಿಂದೂಸ್ಥಾನದವರ ಉತ್ಪಾದನೆ ಶೇಕಡ ೨ರಷ್ಟು ಮಾತ್ರ. ಅದೂ ಸೇರಿಕೊಂಡು ವ್ಯಕ್ತಿಪರ ಆದಾಯ ೧೩೩೬ ರೂಪಾಯಿಗಳು ಬಂದಿದೆಯಷ್ಟೆ. ಇಡೀ ರಾಜ್ಯದ ಎಲ್ಲ ಜಿಲ್ಲೆಗಳ ಪರಮಾನವನ್ನು ತೆಗೆದುಕೊಂಡರೆ ಇದು ರಾಜ್ಯದ ಸರಾಸರಿಗಿಂತ ಜಾಸ್ತಿ ಇದೆ. ಸರ್ಕಾರ, ಆಪರ ಜಿಲ್ಲೆಯಲ್ಲಿ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಖರ್ಚು ಮಾಡಿದ ಹಣದ ವಿವರ ಕೊಟ್ಟರೆ ಮಾನ್ಯ ಸದಸ್ಯರಿಗೆ ತೃಪ್ತಿಯಾಗಬಹುದು. ೧೯೭೯-೮೦ ರಲ್ಲಿ ಡಿಸ್ಟ್ರಿಕ್ಟ್ ಸೆಕ್ಟಾರ್ ಔಟ್‌ಲೇಗೆ ೨೨೧.೧೯ ಲಕ್ಷ ರೂಪಾಯಿಗಳನ್ನೂ ಮತ್ತು ರೆಸಿಡ್ಯುಯರಿ ಸ್ಟೇಟ್ ಸೆಕ್ಟಾರಿಗೆ ೧೭೧.೩೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂದರೆ ಒಟ್ಟು ೩೯೨.೫೬ ಲಕ್ಷ ರೂಪಾಯಿಗಳಾಯಿತು. ಈ ವರ್ಷ ಡಿಸ್ಟ್ರಿಕ್ಟ್ ಸೆಕ್ಟಾರಿಗೆ ೩೫೭.೬೦ ಲಕ್ಷ ರೂಪಾಯಿಗಳನ್ನೂ ಮತ್ತು ರೆಸಿಡ್ಯೂಯರಿ ಸೆಕ್ಟಾರಿಗೆ ೯೭.೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂದರೆ ಒಟ್ಟು ೪೫೫.೧೦ ಲಕ್ಷ ರೂಪಾಯಿಗಳಾಯಿತು. ಅಂದಾಗ ಕಳೆದ ವರ್ಷಕ್ಕಿಂತ ಈ ವರ್ಷವೇ ಜಾಸ್ತಿ ಕೊಟ್ಟ ಹಾಗೆ ಆಯಿತು. ಇಷ್ಟು ಮಾತ್ರವಲ್ಲದೆ, ಕಾರವಾರ ಪೋರ್ಟ್ ಯೋಜನೆಗೆ ಈ ವರ್ಷ ೧.೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದೂ ಕೂಡ ನಿಮ್ಮ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಪಟ್ಟಿದ್ದು. ಕಾರವಾರ ಪೋರ್ಟಿನ ಅಭಿವೃದ್ಧಿ ಯೋಜನೆಯ ಒಟ್ಟು ಅಂದಾಜು ವೆಚ್ಚ ೮ ಕೋಟಿ ರೂಪಾಯಿಗಳು. ಅಲ್ಲದೆ, ಪ್ರತಿ ವರ್ಷ ಮಳೆಗಳನ್ನು ಬೆಳೆಸುವುದರಿಂದ ಉತ್ತರ ಕನ್ನಡ ಜಿಲ್ಲೆಗೆ ೨-೩ ಕೋಟಿ ರೂಪಾಯಿಗಿಂತಲೂ ಹೆಚ್ಚು ಆದಾಯ ಬರುತ್ತದೆ. ಇನ್ನು ಡೇನಿಷ್ ಪ್ರಾಜೆಕ್ಟ್ ಎಂದು ಒಂದು ಇದೆ. It is a major project for integrated development, implemented with the help of Danish International Development Agency. We have spent Rs. 1.36 crores for improvement of Communication System. ಕಳೆದ ವರ್ಷ ಇದಕ್ಕೆ ೬೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. So, total cost of the Project is Rs. 3.30 crores. ಎಸ್. ಎಫ್. ಡಿ. ಎ. ಯೋಜನೆಗೆ ಸುಮಾರು ೧೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಎಂಪ್ಲಾಯಮೆಂಟ್ ಆಫರ್ಮೇಷನ್ ಯೋಜನೆಗೆ ೯೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದನ್ನೆಲ್ಲ ಕಾಳಿ ನದಿ ಯೋಜನೆಯ ಲೆಕ್ಕಕ್ಕೆ ಸೇರಿಸಿಲ್ಲ. ಅದರಿಂದ ನಮಗೆ ನಷ್ಟವಾಗುತ್ತಿದೆ. ಜೊತೆಗೆ ಬೇಡ್ತಿ, ಗಂಗಾವಳಿ ಮುಂತಾದ ಯೋಜನೆಗಳಿಗೆಕೂಡ ಖರ್ಚು ಮಾಡುತ್ತಿದ್ದೇವೆ. I am not taking a credit of it, I am citing this just for the information of the House. ಈಗ ೨೦೫ ಕೋಟಿ ರೂಪಾಯಿಗಳನ್ನು ಇಟ್ಟಿರುವುದು, it is not for the development of the district only. It is for the overall development of the State. ಇದನ್ನೆಲ್ಲ ನಾನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಈ ವರ್ಷ ಕೂಡ ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ಸಾಕಷ್ಟು ಹಣವನ್ನು ಇಟ್ಟಿದ್ದೇವೆ. ಇದುವರೆಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ಕೂಡ ಆಗಿವೆ. ನಿಮ್ಮ ಜಿಲ್ಲೆಯನ್ನು ನಿರ್ಲಕ್ಷಿಸಿದ್ದೇವೆಂಬ ವಿಚಾರ ಸರಿಯಲ್ಲ. ನಿಮ್ಮ ಜಿಲ್ಲೆಗೆ ಖರ್ಚು ಮಾಡಿರುವುದನ್ನು ನೋಡಿದರೆ ಬಾಕಿ ಜಿಲ್ಲೆಯವರು ಕಣ್ಣು ಕಣ್ಣು ಬಿಟ್ಟುಕೊಂಡು ನೋಡಬೇಕು. ಒಟ್ಟಿನಲ್ಲಿ ಹೇಳುವುದಾದರೆ ಉತ್ತರ ಕನ್ನಡ ಜಿಲ್ಲೆಗೆ ಸಾಕಷ್ಟು ಖರ್ಚು ಮಾಡಿದ್ದೇವೆ.

MR. SPEAKER.—I feel that this question requires some more information. Hon. Member may please send a notice. I will allow for half-an-hour discussion.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಅರ್ಧ ತಾಸಿನ ಚರ್ಚೆಗೆ ಅವಕಾಶ ಮಾಡಿಕೊಡಲಿರುವುದರಿಂದ ಒಂದೇ ಒಂದು ಪ್ರಶ್ನೆಯನ್ನು ಈಗ ಕೇಳುತ್ತೇನೆ. ಯಲ್ಲಾಪುರ ಮತ್ತು ಅಂಕೋಲ ತಾಲ್ಲೂಕುಗಳನ್ನು ಏಕೆ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶಗಳು ಎಂದು ಸೇರಿಸಲಿಲ್ಲ ? ಕಾರವಾರ, ಸಿರಸಿ ಮತ್ತು ಹಳಿಯಾಳಗಳನ್ನು ಮಾತ್ರ ಸೇರಿಸಲಿಕ್ಕೆ ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೈಗಾರಿಕೆಗಳಲ್ಲಿ ಹಿಂದುಳಿದ ತಾಲ್ಲೂಕುಗಳು ಎಂದು ವಿಂಗಡಿಸಲಿಕ್ಕೆ ಕೆಲವು ಕ್ರೈಟೀರಿಯಾ ಹಾಕಿಕೊಂಡಿದ್ದೇವೆ. ಆ ಪ್ರಕಾರ, ಕಾರವಾರ, ಸಿರಸಿ ಮತ್ತು ಹಳಿಯಾಳಗಳನ್ನು ಕೈಗಾರಿಕೆಗಳಲ್ಲಿ ಹಿಂದುಳಿದ ಪ್ರದೇಶಗಳೆಂದು ವಿಂಗಡಿಸಿದ್ದೇವೆ. ನಿಮ್ಮ ಪ್ರಕಾರ ಮಾಡಿದರೆ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನೂ ಹಿಂದುಳಿದ ತಾಲ್ಲೂಕುಗಳೆಂದು ಮಾಡಬೇಕಾಗುತ್ತದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ತಾವು ಅನುಸರಿಸುತ್ತಿರುವ ಕ್ರೈಟೀರಿಯಾ ಯಾವುದು ಎಂಬುದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕ್ರೈಟೀರಿಯಾ ವಿಚಾರದಲ್ಲಿ ಈ ಮನೆಯಲ್ಲಿ ಆಗಾಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ಬಗ್ಗೆ ಪುನಃ ಹೇಳಬೇಕೆಂದರೆ ಮತ್ತು ಇನ್ನೇನಾದರೂ ಹೆಚ್ಚಿನ ಮಾಹಿತಿ ಬೇಕಾದರೆ ಮಾನ್ಯ ಸದಸ್ಯರು ನೋಟೀಸ್ ಕೊಡಲಿ. ಈ ಎಲ್ಲ ವಿವರಗಳನ್ನು ಒಂದೇ ಪ್ರಶ್ನೆ ಮೂಲಕ ಹೇಳಲಿಕ್ಕೆ ಬರುವುದಿಲ್ಲ ಮತ್ತು ಅವರು ಕೇಳುವುದಕ್ಕೂ ಆಗುವುದಿಲ್ಲ. ಬೇಕಾದರೆ ಕೈಗಾರಿಕಾ ಇಲಾಖಾ ಬೇಡಿಕೆಗಳಂ ಚರ್ಚೆಗೆ ಬಂದಾಗ ಮಾನ್ಯ ಸದಸ್ಯರು ಮಾತನಾಡಬಹುದು.

Handing over P.W.D. Roads in the Taluk Development Boards.

582 SRI K. RAMABHAT (Puttur)—Will the Minister for Rural Development and Panchayati Raj be pleased to state:—

(a) whether it is a fact that they have issued Government Order to transfer rural roads from the control of P.W.D. to the Taluk Development Boards;

(b) if so, reasons for such transfers,

(c) whether it is possible for the Taluk Development Boards which are financially week to maintain these roads?

SRI B. RAMAIAH (Minister for Rural Development and Panchayati Raj.—

(a) Yes.

(b) Rural roads have been transferred to Taluk Development Boards under rural development scheme to make the Taluk Development Boards and village panchayats to take part more effectively and to co-ordinate the implementation of the programmes.

(c) This matter is held over for re-examination.

ಶ್ರೀ ಕೆ. ರಾಮಭಟ್:—ಮಾನ್ಯ ಅಧ್ಯಕ್ಷರೇ, ಕೆಲವು ದಿವಸಗಳ ಹಿಂದೆ ಮಾನ್ಯ ಕಂದಾಯ ಮಂತ್ರಿಗಳು ಈ ಬಗ್ಗೆ ಉತ್ತರವನ್ನು ಕೊಟ್ಟಿರುವುದರಿಂದ ನಾನು ಬೇರೆ ಉಪಪ್ರಶ್ನೆಯನ್ನು ಕೇಳುವುದಿಲ್ಲ.